ಶ್ರೀ ರಾಮಲಿಂಗರೆಡ್ಡಿ: ಅವರ ಪ್ರಶ್ನೆಗೆ ನಾವು ಕರೆಕ್ಟ್ ಉತ್ತರ ಕೊಟ್ಟಿದ್ದೇವೆ. ಇನ್ನು ಅಕ್ವಿಸಿಷನ್ ಪ್ರೊಸೆಸ್‌ನಲ್ಲಿ ಇರಬಹುದು.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ: 7900 ಎಕರೆ ವಶಪಡಿಸಿಕೊಂಡಿದ್ದು ನೀವು 1900 ಎಕರೆ ಎಂದು ಹೇಳಿದ್ದೀರಿ. ಕರೆಕ್ಟ್ ಇಲ್ಲ.

ಶ್ರೀ ರಾಮಲಿಂಗರೆಡ್ಡಿ: ಕರೆಕ್ಟ್ ಇದೆ. ನೀವು ಪ್ರಶ್ನೆ ಕೇಳಿದ್ದಕ್ಕೆ ಕರೆಕ್ಟ್ ಉತ್ತರ ಇದೆ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ: ನಿಮಗೆ ತಪ್ಪು ಉತ್ತರಗಳನ್ನು ಅಧಿಕಾರಿಗಳು ಒದಗಿಸಿದ್ದಾರೆ.

ಅಧ್ಯಕ್ಷರು: ಅವರನ್ನೂ ಕರೆದು ಮಾತನಾಡಿ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ: ಅಕ್ವಿಸಿಷನ್ ವ್ಯವಸ್ಥೆ ಇನ್ನೂ ಸರಿಯಾಗಿ ಮಾಡಿಲ್ಲ.

ಅಧ್ಯಕ್ಷರು: ನಿಮ್ಮನ್ನೂ ಕರೆದು ಮಾತನಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಆತಂಕವನ್ನು ವ್ಯಕ್ತಪಡಿಸಿದ್ದಾರೆ, ಅವರ ಜೊತೆ ಮಾನ್ಯ ಸಚಿವರನ್ನೂ ನಾನು ಕರೆದು ಮಾತನಾಡುತ್ತೇನೆ. ಭೂ ಸ್ವಾಧೀನಪಡಿಸಿಕೊಂಡ ರೈತರ ಸಮಸ್ಯೆ ಏನು ಇದೆ, ಆ ಕುರಿತು ಚರ್ಚೆ ಮಾಡಿ ಅವರ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಅನೇಕ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸದಿರುವುದು

536 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೊಂದಿರುವ ವಾಹನಗಳ ಅಂದರೆ ಬಸ್ಸುಗಳ ಸಂಖ್ಯೆ ಎಷ್ಟು?

ಆ) ಪ್ರಸ್ತುತ ಸಾರಿಗೆ ಸಂಸ್ಥೆಯಲ್ಲಿ ಬಸ್ಸುಗಳ ಕೊರತೆ ಇರುವುದೆ?

ಇ) ಸಾರಿಗೆ ಸಂಸ್ಥೆಯಲ್ಲಿ ಅನೇಕ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸದಿರಲು ಕಾರಣವೇನು?

ಈ) ಕಳೆದೆರಡು ವರ್ಷಗಳಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಆಯ ವ್ಯಯವೆಷ್ಟು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) 9774

ಆ) ಇಲ್ಲ (ಸದ್ಯ ಇರುವ ಅನುಸೂಚಿಗಳಿಗಾಗಿ)

ಇ) ಸಾರಿಗೆ ಕಾರ್ಯಾಚರಣೆಯಲ್ಲಿ ಅಡಚಣೆಗಳು, ಸಿಬ್ಬಂದಿ ಕೊರತೆ, ಕೆಟ್ಟ ರಸ್ತೆಗಳು, ವಾಹನ ಕೊರತೆ, ಅವಗಡಗಳು ಅಪಘಾತ ಸಿಬ್ಬಂದಿ ಗೈರುಹಾಜರಿ ಇತ್ಯಾದಿ ಕಾರಣಗಳಿಂದ ಉಂಟಾಗುತ್ತದೆ. ಮೇ 1993ಕ್ಕೆ ಶೇ. 15.2 ರಷ್ಟಿದ್ದ ರದ್ದತಿ ಕ.ಮಿ.ಗಳು ಫೆಬ್ರುವರಿ 94ಕ್ಕೆ ಶೇ. 9.5ಕ್ಕೆ ಇಳಿದಿದ್ದು, ಸಾರಿಗೆಗಳ ಕಾರ್ಯಾಚರಣೆಯ ದಕ್ಷತೆಯೂ ಸಹ ಉತ್ತಮಗೊಳ್ಳುತ್ತಲಿದೆ.

ಈ)

	1991-92 (ಲಕ್ಷ ರೂ.ಗಳಲ್ಲಿ)	1992-93 (ಲಕ್ಷ ರೂ.ಗಳಲ್ಲಿ)
ಆದಾಯ	56,587.36	60,576.17
ವೆಚ್ಚ	58,496.82	66,704.86

ಶ್ರೀ ಎಂ.ಎಸ್. ಆತ್ಮಾನಂದ: ಮಾನ್ಯ ಅಧ್ಯಕ್ಷರೇ, ಇವರ ಉತ್ತರದಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೊಂದಿರುವ ವಾಹನಗಳ ಸಂಖ್ಯೆ 9774 ಎಂದು ಹೇಳಿದ್ದಾರೆ. ಈಗ ಇರತಕ್ಕ ಶೆಡ್ಯೂಲ್ ಸಾಕಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಒಂದೊಂದು ಬಸ್‌ಗೆ ನಾಲ್ಕೈದು ಶೆಡ್ಯೂಲ್ ಇರುತ್ತದೆ. ಅಂದರೆ ಬಸ್ ಶೆಡ್ಯೂಲ್‌ಗಳು ಕ್ಯಾನ್ಸಲ್ ಆಗತಕ್ಕ ಪರಿಸ್ಥಿತಿ ಇದೆ. ಆದರೆ ಮುಂದೆ ಅನೇಕ ಮಾರ್ಗಗಳಲ್ಲಿ ಬಸ್‌ಗಳನ್ನು ಓಡಿಸದಿರಲು ಕಾರಣವೇನೆಂದು ಕೇಳಿದರೆ ವಾಹನ ಕೊರತೆ, ಅವಗಡಗಳು, ಸಿಬ್ಬಂದಿ ಗೈರು ಹಾಜರಿ ಇತ್ಯಾದಿ ಕಾರಣ ಹೇಳುತ್ತಾರೆ. ಮತ್ತು ಬಹಳಷ್ಟು ಸಿಬ್ಬಂದಿಗಳನ್ನು ಗೈರು ಹಾಜರಿ ಆಗಲಿಕ್ಕೆ ಕಾರಣವೇನು? ವಾಹನ ಕೊರತೆ ಇರತಕ್ಕದ್ದನ್ನು ತಾವು ಗಮನಿಸಲಿಲ್ಲವೇ? ಯಾವ ಹಂತದ ಸಿಬ್ಬಂದಿ ಕೊರತೆ ಇದೆ ಎನ್ನತಕ್ಕದ್ದನ್ನು ತಾವು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ: ವಾಹನ ಈಗ ಎಷ್ಟು ಸಧ್ಯಕ್ಕೆ ಇದೆ, ಎಕ್ಸಿಸ್ಟಿಂಗ್ ಶೆಡ್ಯೂಲ್ ಎಷ್ಟು ಇದೆ, ಆ ಶೆಡ್ಯೂಲ್ ಪ್ರಕಾರ ವೆಹಿಕಲ್ಸ್‌ಗೆ ಎಷ್ಟು ಡ್ರೈವರ್ ಬೇಕೋ ಅದು ಇದೆ. ನಾಲ್ಕು ಸಾವಿರ ಕಡಿಮೆ ಇತ್ತು, ಅಪಾಯಿಂಟ್‌ಮೆಂಟ್ ಮಾಡುತ್ತೇವೆ, ಆ ಪ್ರಕಾರ ವ್ಯವಸ್ಥೆಯನ್ನು ಒದಗಿಸುತ್ತೇವೆ. 9774 ವೆಹಿಕಲ್ಸ್ ಇದೆ. ಆ ಪ್ರಕಾರ ಶೆಡ್ಯೂಲ್ ಇವೆ. ಎಲ್ಲಿ ಮತ್ತೆ ಅವಶ್ಯಕತೆ ಇದೆ ಅದನ್ನು ತಿಳಿದುಕೊಂಡು existing is enough ಎಂದು ಹೇಳಿದ್ದೇವೆ. ತಾವು ಅನೇಕ ಮಾರ್ಗಗಳಲ್ಲಿ ಬಸ್‌ಗಳನ್ನು ಓಡಿಸದಿರಲು ಕಾರಣ ಕೇಳಿದ್ದೀರಿ. They are, shortage of crew, vehicles breakdown, repairs, accidents, bad roads, and absenteism.

ಈ ಪ್ರಕಾರ ಬಂದಿವೆ. ಮೊದಲು 20 ಪರ್ಸೆಂಟ್ ಇತ್ತು, ಅದನ್ನು 15 ಪರ್ಸೆಂಟ್ ಮಾಡಿದ್ದೇವೆ. ಈಗ 9 ಪರ್ಸೆಂಟ್ ಇದೆ. ಇನ್ನೂ ಸ್ವಲ್ಪ ದಿವಸದಲ್ಲಿ 3-4 ಪರ್ಸೆಂಟ್‌ಗೆ ಬರಬಹುದು. ಅದೃಷ್ಟದಿಂದ ನಾವು ಸುಧಾರಣೆ ಮಾಡುತ್ತಾ ಇದ್ದೇವೆ ಎನ್ನುವ ಆಶ್ವಾಸನೆಯನ್ನು ಕೊಡುತ್ತಿದ್ದೇನೆ.

ಶ್ರೀ ಎಂ.ಎಸ್. ಆತ್ಮಾನಂದ: ಗ್ರಾಮಾಂತರ ಪ್ರದೇಶದಲ್ಲಿ ನೋಡಿರತಕ್ಕದ್ದು ಅನೇಕ ಬಸ್ ಟ್ರಿಪ್‌ಗಳು ಹೋಗುವುದಿಲ್ಲ, ಗ್ರಾಮಾಂತರ ಪ್ರದೇಶದಲ್ಲಿ ತುಂಬಾ ತೊಂದರೆ ಆಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಬಸ್‌ಗಳ ವ್ಯವಸ್ಥೆ ಸುಧಾರಿಸಲು ಏನು ಕ್ರಮವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೈಗೊಳ್ಳುತ್ತದೆ? ದಕ್ಷತೆ ಉತ್ತಮಗೊಳ್ಳುತ್ತಿದೆ ಎಂದು ಹೇಳಿದ್ದೀರಿ. ಆದರೆ ಎಷ್ಟರಮಟ್ಟಿಗೆ ಎಂದು ನಾನು ನೋಡಿದ್ದೇನೆ. ನಾನು ಇದನ್ನು ಕೂಡ ಹತ್ತಿರ ನೋಡಿರತಕ್ಕವನು. ಇನ್ನೂ ಕೂಡ ದಕ್ಷತೆ ಆಗಬೇಕು. ರೊಟೇಷನ್ ಸಿಸ್ಟಂ ಏನು ಬಂದಿದೆ, ಅದರಿಂದಲೇ ಈ ತರಹ ಆಗುತ್ತಿದೆ ಎಂದು ನಾವು ಸ್ಥಳೀಯವಾಗಿ ವಿಚಾರಿಸಿದರೆ ಹೇಳುತ್ತಾರೆ. ಕಂಡಕ್ಟರ್, ಡ್ರೈವರ್ ಇಲ್ಲ ಬಸ್ ಸ್ಟ್ಯಾಂಡಿಗೆ ಹೋಗಲಿಕ್ಕೆ ಆಗುವುದಿಲ್ಲ ಎಂದು ಉತ್ತರ ಕೊಡುತ್ತಿದ್ದಾರೆ. ಇದನ್ನು ಸುಧಾರಿಸಲಿಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ: ಇದಕ್ಕೆಲ್ಲಾ ಕಾರಣ ಹಿಂದೆ ರೋಸ್ಟರ್ ಸಿಸ್ಟಮ್ ಜಾರಿಯಲ್ಲಿ ಇಲ್ಲದಿದ್ದರಿಂದ ಬೋಗಸ್ ಟಿಕೇಟುಗಳ ಹಾವಳಿಯಿಂದ ಆದಾಯದಲ್ಲಿ

ಸೋರಿಕೆ ಆಗುತ್ತಿತ್ತು. ಸೋರಿಕೆ ತಡೆಗಟ್ಟುವ ದೃಷ್ಟಿಯಿಂದ ನಾವು ರೋಸ್ಟರ್ ಸಿಸ್ಟಮ್ ಮಾಡಲಾಯಿತು, ಈಗ ಸೋರಿಕೆ ಕಡಿಮೆಯಾಗಿದೆ. ಇದರ ಜೊತೆಗೆ ಏನು ಸುಧಾರಣೆಯಾಗಬೇಕು, ಯಾವ ರೀತಿ ಬಸ್ ನಿಗದಿಯಾದ ಅವಧಿಗೆ ಹೊರಡಬೇಕು, ಅದರ ಪ್ರಕಾರ ಇವೊತ್ತಿನ ತನಕ ಆಗುತ್ತಿದೆ. ಈ ರೀತಿ ಮಾಡಿದ್ದರಿಂದ ಸ್ವಲ್ಪ ದಿವಸ ಪ್ರತಿಭಟನೆ ಕೇಳಿ ಬಂತು. ಮನುಷ್ಯನಿಗೆ ಯಾವ ರೀತಿ ಸ್ವತಂತ್ರವಿರುತ್ತದೋ, ಹೊಸ ಪದ್ಧತಿ ಜಾರಿಗೆ ತರುವುದರಿಂದ ಸ್ವಲ್ಪ ತೊಂದರೆಯಾಗುತ್ತದೆ. ಇದಕ್ಕೆ ಕಾರ್ಮಿಕ ಸಂಘಟನೆಯವರು ಉದ್ದೇಶಪೂರ್ವಕವಾಗಿ ಅಡ್ಡಿಪಡಿಸಿದರು, ಇದೆಲ್ಲವನ್ನೂ ನಾವು ನಿವಾರಣೆ ಮಾಡಿದ್ದೇವೆ, ಅವರಿಗೂ ಇದು ಗೊತ್ತಾಗಿದೆ. ರೋಸ್ಟರ್ ಸಿಸ್ಟಮ್ ಮಾಡುವುದರಿಂದ ಒಳ್ಳೆಯ ಅನುಕೂಲಗಳಿವೆ. 68 ಕಾರ್ಪೊರೇಷನ್‌ಗಳಲ್ಲಿ ಈ ಪದ್ಧತಿ ಇದೆ. ಇಲ್ಲಿ ಎಕ್ಸ್‌ಪ್ಟೆನ್ ಮಾಡಲು ಆಗುವುದಿಲ್ಲ, ಆ ದೃಷ್ಟಿಯಿಂದ ರೋಸ್ಟರ್ ಸಿಸ್ಟಮ್ ಮಾಡಿದ್ದೇವೆ, ಇವೊತ್ತು ಸರಿಯಾದ ರೀತಿಯಲ್ಲಿ ವಾಹನಗಳ ಸಂಚಾರ ನಡೆಸುವ ಹಂತದಲ್ಲಿದ್ದೇವೆ, ಇದರಿಂದ ಸಂಸ್ಥೆಯನ್ನು ಲಾಭದಾಯಕವಾಗಿ ಮಾಡಬಹುದೆಂದು ಹೇಳುತ್ತಿದ್ದೇನೆ.

ಕಲಘಟಗಿ ನಗರದಲ್ಲಿ ಬಸ್ ಡಿಪೋ ತೆರೆಯುವುದು

465 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ನಗರದಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ ಡಿಪೋ ತೆರೆಯುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಇಲ್ಲ

ಶ್ರೀ ಪಿ.ಸಿ. ಸಿದ್ದನಗೌಡರ್: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಸರಿಯಾಗಿ ಕೊಡದೆ ತಪ್ಪು ಉತ್ತರ ಕೊಟ್ಟಿದ್ದಾರೆಂದು ಹೇಳುತ್ತಿದ್ದೇನೆ. ಕಲಘಟಗಿ ನಗರದಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ ಡಿಪೋ ತೆರೆಯುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಉತ್ತರಿಸಿದ್ದಾರೆ. ಈ ಬಗ್ಗೆ ಪರಿಶೀಲಿಸುತ್ತೇವೆಂದು ಹಿಂದೆ ಹೇಳಿದ್ದರು. ಅದಕ್ಕೆ ಇನ್ನೊಂದು ಪ್ರಶ್ನೆ ಕೇಳಿದಾಗ ತಪ್ಪು ಮಾಹಿತಿ ಏನು ಕೊಡುತ್ತಿದ್ದಾರೆ. ಇದಕ್ಕೊಂದು ಉದಾಹರಣೆ ಕೊಡುತ್ತಿದ್ದೇನೆ. ನಗರದಲ್ಲಿ ಬಸ್ ನಿಲ್ದಾಣ ಸೌಕರ್ಯವಿಲ್ಲವೆಂದು ಕೇಳಿದರೆ, ಇಲ್ಲ ಎಂದು ಉತ್ತರ ಕೊಡುತ್ತಾರೆ. ಇದರ ಜೊತೆಗೆ ಒದಗಿಸಲಾಗಿದೆ ಎಂದೂ ಕೊಟ್ಟಿದ್ದಾರೆ. ಇದರಲ್ಲಿ ಮಾಹಿತಿ ಯಾವುದು ತಿಳಿದುಕೊಳ್ಳಬೇಕೆಂಬುದರ ಬಗ್ಗೆ ಸಂಶಯ ಬಂದಿದೆ. ಆದುದರಿಂದ, ಕಲಘಟಗಿ ನಗರಕ್ಕೆ ಬಸ್ ಡಿಪೋ ತೆರೆಯುವ ಕುರಿತು ಏನು ಕ್ರಮ ತೆಗೆದುಕೊಳ್ಳಲಾಗುತ್ತದೆಂಬುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಭೀಮಣ್ಣ ಖಂಡ್ರೆ: ನೀವು ಕೇಳಿದ ಮಾಹಿತಿಗೆ ನಾವು ಉತ್ತರ ನೀಡಿದ್ದೇವೆ. ತಾವು ಭೂಮಿಯನ್ನು ಕೊಡಿಸುವುದಾದರೆ ಆ ನಗರದಲ್ಲಿ ಬಸ್ ಡಿಪೋ ತೆರೆಯುವ ಕುರಿತು ಆಲೋಚಿಸಬಹುದು. ಆದರೆ, ಇವೊತ್ತಿನ ಪರಿಸ್ಥಿತಿಯಲ್ಲಿ there is no necessity for any bus-stand there.

ಶ್ರೀ ಪಿ.ಸಿ. ಸಿದ್ದನಗೌಡರ್: ನಾನು ಕೇಳಿರುವ ಪ್ರಶ್ನೆಗೆ ಒದಗಿಸಿರುವ ಉತ್ತರ ಸರಿಯಿಲ್ಲವೆಂದು ಹೇಳುತ್ತಿದ್ದೇನೆ. ಪ್ರಸ್ತಾವ ಸರ್ಕಾರದ ಗಮನದಲ್ಲಿದ್ದು, ಪರಿಶೀಲಿಸಲಾಗುತ್ತಿದೆ ಎಂದು ಹೇಳಿ ಈಗ ಅದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಿದ್ದಾರೆ. ನನ್ನ ಪಾಯಿಂಟ್ ಏನೆಂದರೆ, ಬೇರೆ ತಾಲ್ಲೂಕಿಗೆ ಬಸ್ ಡಿಪೋ ಒದಗಿಸಿಕೊಟ್ಟಿದ್ದೀರಿ,